**ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾದಂಃ ನ್ಯಾಯಾಲಯಃ ನರಸಿಂಹರಾಜಪುರ**

**ಸಿಸಿಃನಂಃ 521/2024**

**ಸಿ.ಡಬ್ಲ್ಯೂಃ 3**

**ಪಿ.ಡಬ್ಲೂಃ 4**

**ಸಾಕ್ಷಿದಾರರ ಹೆಸರು ಃ ರಮೇಶ ಎಂ ವಿ**

**ತಂದೆಯ ಹೆಸರು ಃಮಾನಪ್ಪ**

**ವಯಸ್ಸು ಃ 35 ವರ್ಷ**

**ಉದ್ಯೋಗ ಃ ಅಬಕಾರಿ ಪಿ ಸಿ**

**ವಾಸಸ್ಥಳ ಃ ಮೂಡಿಗೆರೆ**

**ದಿನಾಂಕಃ 17.03.2026 ರಂದು ಪ್ರಮಾಣವಚನ ಬೋಧಿಸಲಾಯಿತು.**

**ಃಃ ಮುಖ್ಯ ವಿಚಾರಣೆಃ ಮಾನ್ಯಃ ಎಪಿಪಿಯವರಿಂದಃ**

ನಾನು ಡಿಸೆಂಬರ 2023 ರಿಂದ ಜೂನ್ 2024 ರವರೆಗೆ ನ ರಾ ಪುರ ವಲಯದಲ್ಲಿ ಅಬಕಾರಿ ಪೇದೆಯಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿನಾಂಕಃ 20.3.2024 ರಂದು ಚಾಸಾ-1 ರವರೊಂದಿಗೆ ನ ರಾ ಪುರ ವಲಯದ ಬಿ ಹೆಚ್ ಕೈಮರದಲ್ಲಿ ಲೋಕಸಭಾ ಚುನಾವಣಾ ಹಿನ್ನಲೆಯಲ್ಲಿ ಗಸ್ತು ಕರ್ತವ್ಯದಲ್ಲಿರುವಾಗ್ಗೆ ರಾತ್ರಿ 8.00 ಸಮಯದಲ್ಲಿ ನ ರಾ ಪುರದಿಂದ ಬಾಳೆಹೊನ್ನೂರು ಕಡೆಗೆ ಬಿಳಿ ಬಣ್ಣದ ಹೋಮ್ನಿ ವಾಹನ ಸಂಃ ಕೆಎ-18-ಝಡ್-1931 ರಲ್ಲಿ ಅಕ್ರಮವಾಗಿ ಮದ್ಯವನ್ನು ಸಾಗಾಟ ಮಾಡುತ್ತಿದ್ದಾರೆಂಬ ಮಾಹಿತಿ ಚಾಸಾ-1 ರವರಿಗೆ ಬಂದಿದ್ದು, ನಂತರ ಬಿ ಹೆಚ್ ಕೈಮರದಲ್ಲಿದ್ದ ಗ್ರಾಮಸ್ಥರನ್ನು ಪಂಚರಾಗಿ ಸಹಕರಿಸಬೇಕೆಂದು ಕೋರಿದ್ದು ಸದರಿಯವರು ರಾತ್ರಿ ಸಮಯವಾದ್ದರಿಂದ ಪಂಚ ಸಾಕ್ಷಿದಾರರಾಗಿ ಬರಲು ಒಪ್ಪಲಿಲ್ಲ ಆ ಕಾರಣ ಚಾಸಾ-1 ರವರು ನನಗೆ ಮತ್ತು ಚಾಸಾ-2 ರವರಿಗೆ ಪಂಚ ಸಾಕ್ಷಿದಾರರಾಗಿ ಸಹಕರಿಸಬೇಕೆಂದು ತಿಳಿಸಿರುತ್ತಾರೆ. ನಂತರ ಬಿ ಹೆಚ್ ಕೈಮರದಿಂದ ಒಂದುವರೆ ಕಿ ಮೀ ದೂರದಲ್ಲಿರುವ ದೀಪ್ತಿ ಸರ್ಕಲ್ ಬಳಿ ಮದರ್ ತೆರೆಸಾ ಬಸ್ ನಿಲ್ದಾಣದ ಹತ್ತಿರ ಗಸ್ತು ನಡೆಸುತ್ತಿದ್ದ ಸಂದರ್ಭದಲ್ಲಿ ಒಂದು ಬಿಳಿ ಬಣ್ಣದ ಹೋಮ್ನಿ ವಾಹನ ಸಂಃ ಕೆಎ-18-ಝಡ್-1931 ಆ ಮಾರ್ಗದಲ್ಲಿ ಬಂದಿದ್ದು ಅದನ್ನು ತಡೆದು ನಿಲ್ಲಿಸಿ ಪರಿಶೀಲಿಸಿದೆವು. ಸದರಿ ವಾಹನದ ಚಾಲಕ ಆರೋಪಿತರು ಸದರಿ ವಾಹನದಲ್ಲಿದ್ದ ಅಕ್ರಮ ಮದ್ಯ ಸಾಗಾಟದ ಬಗ್ಗೆ

ವಿಚಾರಿಸಲಾಗಿ ಅವರು ಅದರ ಬಗ್ಗೆ ಸೂಕ್ತ ಉತ್ತರ ನೀಡಲಿಲ್ಲ. ನಂತರ ಶೋಧನಾ ಸಮುಚ್ಚಿತ ವಾರೆಂಟನ್ನು ತಯಾರಿಸಿಕೊಂಡು ಪಂಚರಾದ ನಾನು ಮತ್ತು ಚಾಸಾ-2 ರವರ ಸಮಕ್ಷಮ ವಾಹನವನ್ನು ಪರಿಶೀಲಿಸಲಾಗಿ ಸದರಿ ವಾಹನದ ಸೀಟಿನ ಮೇಲೆ ಒಂದು ಬಿಳಿ ಬಣ್ಣದ ಪ್ಲಾಸ್ಟಿಕ್ ಚೀಲ ಇದ್ದು, ಅದನ್ನು ಶೋಧನೆ ಮಾಡಲಾಗಿ ಅದರಲ್ಲಿ ಮಧ್ಯ ತುಂಬಿದ 180 ಮಿಲಿಯ 20 ಒರಿಜಿನಲ್ ಚಾಯ್ಸ್ ಟೆಟ್ರಾ ಪ್ಯಾಕೆಟ್ ಗಳು, 90 ಮಿಲಿಯ 10 ಒರಿಜಿನಲ್ ಚಾಯ್ಸ್ ಟೆಟ್ರಾ ಪ್ಯಾಕೆಟ್ ಗಳು ಒಟ್ಟು 4.50 ಲೀ ಮಧ್ಯ ಕಂಡು ಬಂದಿರುತ್ತದೆ. ಸದರಿ ಮಧ್ಯವನ್ನು ಎಲ್ಲಿಂದ ಮತ್ತು ಯಾರಿಂದ ಖರೀದಿ ಮಾಡಿರುತ್ತೀರಿ ಎಂದು ಆರೋಪಿತರನ್ನು ಕೇಳಲಾಗಿ ಸೂಕ್ತ ದಾಖಲೆ ಮತ್ತು ಉತ್ತರ ನೀಡಲಿಲ್ಲ. ಮೇಲ್ಕಂಡ ಎಲ್ಲಾ ಮಧ್ಯವನ್ನು ಒಂದು ಬಿಳಿ ಚೀಲದಲ್ಲಿ ಹಾಕಿ ಕಟ್ಟಿ 353 ಎಂದು ಇಲಾಖ ಸೀಲು ಮಾಡಿ ಗುರುತಿನ ಚೀಟಿ ಹಾಗೂ ಅದರ ಮೇಲೆ ನಮ್ಮಗಳ ಸಹಿ ಪಡೆಯಲಾಯಿತು. ಚಾಸಾ-1 ರವರು ಪಂಚನಾಮೆಯನ್ನು ರಾತ್ರಿ 8.30 ರಿಂದ 9.30 ಗಂಟೆಯವರೆಗೆ ಕೃತ್ತ ಸ್ಥಳದಲ್ಲಿಯೇ ನನ್ನ ಮತ್ತು ಚಾಸಾ-2 ರವರ ಸಮಕ್ಷಮ ಬರೆದಿರುತ್ತಾರೆ. ಸದರಿ ಸಮಯದಲ್ಲಿ ಚಾಸಾ-1 ರವರ ಪೋನ್ ಮೂಲಕ ಭಾವಚಿತ್ರಗಳನ್ನು ತೆಗೆದಿರುತ್ತಾರೆ. ದಿನಾಂಕಃ 3.5.2024 ರಂದು ಚಾಸಾ-6 ರವರು ನೀಡಿದ ಮೌಖಿಕ ಆದೇಶದಂತೆ ನಾನು ಪ್ರಕರಣದಲ್ಲಿ ದೊರೆತ ಟೆಟ್ರಾ ಪ್ಯಾಕೆಟ್ ಗಳನ್ನು ಎಫ್ ಎಸ್ ಎಲ್ ಬೆಂಗಳೂರಿಗೆ ಸಲ್ಲಿಸಿ ಬಂದಿರುತ್ತೇನೆ. ನ್ಯಾಯಾಲಯದ ಮುಂದೆ ಇರುವ 180 ಮಿಲಿಯ 19 ಒರಿಜಿನಲ್ ಚಾಯ್ಸ್ ಟೆಟ್ರಾ ಪ್ಯಾಕೆಟ್ ಗಳ ಖಾಲಿ ಪ್ಯಾಕೆಟ್ ಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅವುಗಳನ್ನು ಒಟ್ಟಾಗಿ ಎಂಒ-1 ಎಂದು ಗುರುತಿಸಲಾಯಿತು. ನ್ಯಾಯಾಲಯದ ಮುಂದೆ ಇರುವ 90 ಮಿಲಿಯ 11 ಒರಿಜಿನಲ್ ಚಾಯ್ಸ್ ಟೆಟ್ರಾ ಪ್ಯಾಕೆಟ್ ಗಳ ಖಾಲಿ ಪ್ಯಾಕೆಟ್ ಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅವುಗಳನ್ನು ಒಟ್ಟಾಗಿ ಎಂಒ-2 ಎಂದು ಗುರುತಿಸಲಾಯಿತು. ಒಂದು ಬಿಳಿಯ ಚೀಲವನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ಎಂಒ-3 ಎಂದು ಗುರುತಿಸಲಾಯಿತು. ಸದರಿ ಎಂಒ-3 ರ ಮೇಲೆ ಅಂಟಿಸಿರುವ ಚೀಟಿಯ ಮೇಲೆ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ಎಂಒ-3(ಎ) ಎಂದು ಗುರುತಿಸಲಾಯಿತು.

ಈಗ ಸಾಕ್ಷಿಯು ಸದರಿ ಸ್ವತ್ತು ಸ್ವಾಧೀನ ಮಹಜರನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-6, ಸಾಕ್ಷಿಯ ಸಹಿಯನ್ನು ನಿಪಿ-6(ಬಿ) ಎಂದು ಗುರುತಿಸಲಾಯಿತು. ಸಾಕ್ಷಿ ಪೋಟೋವನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-7 ಎಂದು ಗುರುತಿಸಲಾಯಿತು. ನಾನು ಈ ಪ್ರಕರಣದಲ್ಲಿ ಹೇಳಿಕೆ ನೀಡಿರುತ್ತೇನೆ. ನ್ಯಾಯಾಲಯದ ಮುಂದಿರುವ ಆರೋಪಿಯನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ.

**ಃಪಾಟೀ ಸವಾಲು ಆರೋಪಿ ಪರ ಶ್ರೀ. ಜಿ ಡಿವಕೀಲರಿಂದಃಃ**

ನಾವು ಸದರಿ ದಿನದಂದು ಠಾಣೆಗೆ ಹೋಗುವ ವೇಳೆಗೆ ಫೋನ್ ಮಾಡಿ ಕಚೇರಿಯಲ್ಲಿ ಲಭ್ಯವಿದ್ದ ಖಾಸಗಿ ಕಂಪ್ಯೂಟರ್ ಆಪರೇಟರ್ ರವರಿಗೆ ವ್ಯಾಟ್ಸಪ್ ಮುಖಾಂತರ ಪ್ರಕರಣದ ಎಲ್ಲಾ ಮಾಹಿತಿಯನ್ನು ಚಾಸಾ-1 ರವರು ನೀಡಿದ್ದು, ಸದರಿ ಮಾಹಿತಿಯ ಮೇರೆಗೆ ಖಾಸಗಿ ಕಂಪ್ಯೂಟರ್ ಆಪರೇಟರ್ ರವರು ಪ್ರಥಮ ವರ್ತಮಾನ ವರದಿಯನ್ನು ದಾಖಲಿಸಿದರು. ಈ ಪ್ರಕರಣದ ಕ್ರೈಂ ನಂಬರ್ ಮಾಹಿತಿಯನ್ನು ನಾವು ಕಚೇರಿಗೆ ಹೋದ ನಂತರ ಪಡೆದುಕೊಂಡಿರುತ್ತೇವೆ. ಎಂಒ-3 ರ ಮೇಲಿರುವ ಚೀಟಿಯನ್ನು ಸ್ಥಳದಲ್ಲಿಯೇ ನಾವು ಅಂಟಿಸಿರುತ್ತೇವೆ. ಸದರಿ ಚೀಟಿಯ ಮೇಲಿರುವ ಬರವಣಿಗೆಯನ್ನು ಸ್ಥಳದಲ್ಲಿಯೇ ಬರೆದಿರುತ್ತೇವೆ. ನಿಪಿ-6 ರಲ್ಲಿ ಸ್ಥಳದಲ್ಲಿ ದೊರಕಿದ 180 ಮಿಲಿಯ 19 ಒರಿಜಿನಲ್ ಚಾಯ್ಸ್ ಟೆಟ್ರಾ ಪ್ಯಾಕೆಟ್ ಗಳ ಸಂಖ್ಯೆ 20 ಎಂದೂ, 90 ಮಿಲಿಯ 10 ಒರಿಜಿನಲ್ ಚಾಯ್ಸ್ ಟೆಟ್ರಾ ಪ್ಯಾಕೆಟ್ ಗಳನ್ನು ಅಮಾನತುಪಡಿಸಿಕೊಂಡೆವು ಎಂದು ಬರೆಯಲಾಗಿದೆ ಎಂದರೆ ಸರಿ. ಸದರಿ ಎಂಒ-1 ಮತ್ತು 2 ಟೆಟ್ರಾ ಪ್ಯಾಕೆಟ್ ಗಳ ಮೇಲೆ ಅಬಕಾರಿ ಇಲಾಖೆಯ ಮೊಹರು ಇದೆ ಎಂದರೆ ಸರಿ. ನಿಪಿ-7 ರಲ್ಲಿ ಚಾಸಾ-1 ರಿಂದ 3 ಇದ್ದೇವೆಂದರೆ ಸರಿ. ನಿಪಿ-7 ರಲ್ಲಿ ಆರೋಪಿತರು ಇರುವುದಿಲ್ಲ ಎಂದರೆ ಸರಿ. ನಿಪಿ-7 ನ್ನು ಖಾಸಗಿ ವಾಹನದ ಚಾಲಕ ತೆಗೆದಿರುತ್ತಾರೆ. ಸದರಿ ವ್ಯಕ್ತಿಯನ್ನು ಈ ಪ್ರಕರಣದ ಪಂಚ ಸಾಕ್ಷಿದಾರರನ್ನಾಗಿ ಸಹಕರಿಸುವಂತೆ ನೋಟೀಸು ನೀಡಿರುವುದಿಲ್ಲ.

ಸದರಿ ಸ್ಥಳ ಪಂಚನಾಮೆಯಲ್ಲಿ ನಮೂದು ಮಾಡಿರುವ ಕೃತ್ಯ ನಡೆದ ಸ್ಥಳದ ಬಳಿ ತಾಲ್ಲೂಕು ಕಚೇರಿ ಇದೆ ಎಂದರೆ ಸರಿ. ಸದರಿ ತಾಲ್ಲೂಕು ಕಚೇರಿಯ ಆವರಣದಲ್ಲಿಯೇ ಅಬಕಾರಿ ಕಚೇರಿ ಕೂಡ ಇದೆ ಎಂದರೆ ಸರಿ. ದೀಪ್ತಿ ಸರ್ಕಲ್ ಬಳಿ ಸುಮಾರು ಹೋಟೆಲ್, ಅಂಗಡಿ ಸಮುಚ್ಚಯಗಳು ಇವೆ ಎಂದರೆ ಸರಿ. ಚಾಸಾ-1 ರವರು ಸ್ಥಳದಲ್ಲಿ ಸ್ವತಂತ್ರ ಪಂಚ ಸಾಕ್ಷಿದಾರರು ಲಭ್ಯವಿದ್ದರೂ ಸಹ ಈ ಪ್ರಕರಣಕ್ಕೋಸ್ಕರ ಇಲಾಖೆಯಲ್ಲಿ ಚಾಸಾ-1 ರವರ ಅಡಿಯಲ್ಲಿ ಕರ್ತವ್ಯ ನಿರ್ವಹಿಸುವ ನನ್ನನ್ನು ಮತ್ತು ಚಾಸಾ-2 ರವರನ್ನು ಪಂಚ ಸಾಕ್ಷಿದಾರರನ್ನಾಗಿ ಉದ್ದೇಶ ಪೂರ್ವಕವಾಗಿ ಮಾಡಿಕೊಂಡಿದ್ದಾರೆ ಎಂದರೆ ಸರಿಯಲ್ಲ. ನಾನು ಚಾಸಾ-1 ರವರಿಗೆ ಅನುಕೂಲ ಮಾಡುವ ಉದ್ದೇಶದಿಂದ ಈ ಪ್ರಕರಣದಲ್ಲಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಸದರಿ ದಿನದಂದು ನಾವು ಆರೋಪಿತರಿಂದ ಯಾವುದೇ ವಸ್ತುಗಳನ್ನು ಅಮಾನತುಪಡಿಸಿಕೊಂಡಿರುವುದಿಲ್ಲ ಮತ್ತು ಸ್ಥಳದಲ್ಲಿಯೇ ನಿಪಿ-6 ನ್ನು

ದಾಖಲಿಸಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ಎಂಒ-1 ರಿಂದ 3 ಕ್ಕೂ ಆರೋಪಿತರಿಗೂ ಯಾವುದೇ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ.

**ಃ ಮರು ವಿಚಾರಣೆ ಇಲ್ಲಃ**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸ ಇ ಎ ಒ**

**ಪ್ರ.ದ.ನ್ಯಾದಂಃ ನ.ರಾ.ಪುರ.**

**ಸಾಕ್ಷಿ ಸಹಿಃ**